**ದಿನಾಂಕ: 26-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ಶ್ರೀ ಬಿ ಎಂ ವಕೀಲರಿಂದ ಆರೋಪಿ ಪರವಾಗಿಃ**

26) ಆರೋಪಿಗೆ 2 ಬಾರಿ ಹಣ ನೀಡಿರುತ್ತೇನೆ. ಚೆಕ್ ನ್ನು ಆರೋಪಿ ಯಾವಾಗ ಕೊಟ್ಟಿರುತ್ತಾರೆ ಎಂದು ಪ್ರಶ್ನಿಸಲಾಗಿ ಸಾಕ್ಷಿ ಹಲವಾರು ವರ್ಷಗಳಾಗಿರುವುದರಿಂದ ಮರೆತು ಹೋಗಿದೆ ಎಂದು ನುಡಿಯುತ್ತಾರೆ. ಪಿರ್ಯಾದಿಯಲ್ಲಿ ಹೇಳಿರುತ್ತೇನೆ. ಆರೋಪಿ ಒಮ್ಮೆಲೇ ಹಣ ಕೇಳಿದ್ದರೋ ಬೇರೆ ಬೇರೆ ಹಣ ಕೇಳಿದ್ದರೋ ಎಂದು ಪ್ರಶ್ನಿಸಲಾಗಿ ಸಾಕ್ಷಿ ಆರೋಪಿ 10 ಲಕ್ಷ ಹಣ ಕೇಳಿದ್ದು ನನ್ನ ಹತ್ತಿರ ಅಷ್ಟು ಹಣ ಇಲ್ಲದ ಕಾರಣ ಒಮ್ಮೆ 5 ಲಕ್ಷ ಹಣ ಮತ್ತು ಇನ್ನೋಮ್ಮೆ 1 ಲಕ್ಷ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. 2ನೇ ಬಾರಿ ಹಣ ಕೊಟ್ಟಾಗ ಆರೋಪಿ ಚೆಕ್ ಕೊಟ್ಟಿರುತ್ತಾರೆ. ಮೊದಲನೇ ಬಾರಿ ಹಣ ಕೊಟ್ಟಾಗ ಚೆಕ್ ಪಡೆಯಲು ತೊಂದರೆ ಇತ್ತಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಆಗ ಆತ ಚೆಕ್ ತಂದಿರಲಿಲ್ಲ ಎಂದು ನುಡಿಯುತ್ತಾರೆ.

27) ಹಣ ಕೊಟ್ಟ ದಿನಕ್ಕೂ ಚೆಕ್ ನ್ನು ಬ್ಯಾಂಕಿಗೆ ಹಾಜರುಪಡಿಸಿದ ದಿನಾಂಕಕ್ಕೂ ಎರಡೂವರೆ ವರ್ಷ ಅಂತರವಿದೆ ಎನ್ನುವುದು ಸರಿಯಲ್ಲ. ಎಷ್ಟು ಬಡ್ಡಿ ತೆಗೆದುಕೊಂಡಿರುತ್ತೀರಿ ಎಂದು ಪ್ರಶ್ನಿಸಲಾಗಿ ಸಾಕ್ಷಿ ಬಡ್ಡಿ ತೆಗೆದುಕೊಂಡಿಲ್ಲ ವಿಶ್ವಾಸಕ್ಕೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಲೇವಾದೆವಿ ವ್ಯವಹಾರ ಮಾಡುತ್ತಿದ್ದು, ಬಡ್ಡಿಗೆ ಸಾಲ ಕೊಡುತ್ತೇನೆ ಎನ್ನುವುದು ಸರಿಯಲ್ಲ.

28) 6 ಲಕ್ಷ ಆರೋಪಿಗೆ ನೀಡಿರುವ ಹಣ ಸಾಲದ ಹಣವಲ್ಲ ಎಂದರೆ ಸರಿಯಲ್ಲ. ಬಡ್ಡಿ ಇಲ್ಲದೇ ವಿಶ್ವಾಸದಿಂದ ಸಾಲ ಕೊಟ್ಟಿರುತ್ತೇನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 6 ಲಕ್ಷ ಹಣ ಆರೋಪಿ ಖಾತೆಗೆ ಹಾಕಿದ ಹಣವು ನಾನು ನನ್ನ ತಮ್ಮ ಎಲೆಕ್ಟ್ರಿಕ್ ಕೆಲಸ ಮಾಡಿಸಿದ ಬಾಬ್ತು ಹಣವಾಗಿರುತ್ತದೆ ಎನ್ನುವುದು ಸರಿಯಲ್ಲ. ಕಾಂಟ್ರಾಕ್ಟ್

ಮಾಡಿಕೊಂಡಂತೆ ಆರೋಪಿಗೆ 8 ವಿದ್ಯುತ್ ಕಂಬಗಳನ್ನು ಆ ಕೂಡಲೇ ಹಾಕಲು ಆಗಲಿಲ್ಲ ಎನ್ನುವುದು ಸರಿಯಲ್ಲ.

29) ವಿದ್ಯುತ್ ಕಂಬಗಳನ್ನು ಕೂಡಲೇ ಹಾಕದೇ ಇದ್ದ ಕಾರಣ ಮತ್ತು ಆರೋಪಿಗೆ ಸಮಯಾವಕಾಶ ಬೇಕಾಗಿದ್ದ ಕಾರಣ ನನ್ನ ತಮ್ಮ ಖಾತ್ರಿಗೋಸ್ಕರ ಆರೋಪಿಯಿಂದ 4 ಖಾಲಿ ಚೆಕ್ ಗಳನ್ನು ಪಡೆದಿದ್ದರು ಎನ್ನುವುದು ಸರಿಯಲ್ಲ. ನನ್ನ ತಮ್ಮನಿಗೆ ನೀಡಿದ 4 ಖಾಲಿ ಚೆಕ್ ಗಳಲ್ಲಿ ನಿಪಿ 1 ಚೆಕ್ ನ್ನು ನಾನು ಪಡೆದು ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಮ್ಮ ಮಗ ಮಹೇಶ್ ನಿಮ್ಮ ತಮ್ಮನಿಂದ ಚೆಕ್ ಸಂ. 412872 ನ್ನು ಪಡೆದು 5 ಲಕ್ಷ ಸಾಲ ಪಡೆದಿರುತ್ತಾರೆ ಎಂದು ಸುಳ್ಳು ನೋಟೀಸ್ ನ್ನು ದಿಃ 31-03-2021 ರಲ್ಲಿ ಆರೋಪಿಗೆ ಕಳುಹಿಸಿರುತ್ತಾರೆಂದು ಸೂಚಿಸಲಾಗಿ ಸಾಕ್ಷಿ ಅದು ಸುಳ್ಳು ಎಂದು ನುಡಿಯುತ್ತಾರೆ. ನಾನು ಮತ್ತು ನನ್ನ ಮಗ ಚೆಕ್ ಗಳನ್ನು ದುರುಪಯೋಗಪಡಿಸಿಕೊಂಡು ಆರೋಪಿಗೆ ಸುಳ್ಳು ನೋಟೀಸ್ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

30) ಕೆಲಸ ಎಲ್ಲ ಮುಗಿದ ಮೇಲೆ ಚೆಕ್ ನ್ನು ವಾಪಾಸು ಮಾಡುತ್ತೇವೆಂದು ನನ್ನ ತಮ್ಮ ಒಪ್ಪಿದ್ದೆವು ಎಂದರೆ ಸರಿಯಲ್ಲ. ನನ್ನ ತಮ್ಮ ಮರಣ ಹೊಂದು ಒಂದು ವರ್ಷವಾಗಿರುತ್ತದೆ. ನನ್ನ ತಮ್ಮನ ಮನೆಯ ಎಲೆಕ್ಟ್ರಿಕ್ ಕೆಲಸಕ್ಕೆ ಸೇರಿಸಿಕೊಂಡಿದ್ದೆ. ತಮ್ಮನ ಮನೆಯ ಎಲೆಕ್ಟ್ರಿಕ್ ಕೆಲಸ 2019 ರಲ್ಲಿ ಮುಗಿಯಿತು ಎಂದು ಸೂಚಿಸಲಾಗಿ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಕೀಲರ ಮುಖಾಂತರ ಆರೋಪಿಗೆ ಕಳುಹಿಸಿದ ನೊಟೀಸ್ ನ್ನು ಎಲೆಕ್ಟ್ರಿಕ್ ಕಾಂಟ್ರಕ್ಟ್ ಮುಗಿಯುವವರೆಗೂ ಜಾರಿಯಾಗದೇ ಹಾಗೆ ನೋಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಈ ಪಿರ್ಯಾದಿ ಸಲ್ಲಿಸುವ ಒಂದು ತಿಂಗಳ ಪೂರ್ವದಲ್ಲಿ ತಮ್ಮನ ಮನೆಯ ಎಲೆಕ್ಟ್ರಿಕ್ ಕೆಲಸವನ್ನು ಆರೋಪಿ ಮುಗಿಸಿಕೊಟ್ಟಿರುತ್ತಾರೆ ಎಂದು ಸೂಚಿಸಲಾಗಿ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಖಾತ್ರಿಗೆ ಕೊಟ್ಟ ಇನ್ನೂ 2 ಖಾಲಿ ಚೆಕ್ ಗಳು ನಿಮ್ಮ ತಮ್ಮನ ಹತ್ತಿರ ಇವೆ ಎಂದು ಸೂಚಿಸಲಾಗಿ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

31) ಆರೋಪಿಯು 6 ಲಕ್ಷ ನಮೂದಿಸಿ ದಿಃ05-02-2019 ಎಂದು ದಿನಾಂಕವನ್ನು ನಮೂದಿಸಿ ಚೆಕ್ ನ್ನು ಕೊಟ್ಟಿರುತ್ತಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನ್ನ ಸಮಕ್ಷಮ ಚೆಕ್ ನ್ನು ಬರೆದುಕೊಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 1 ರಲ್ಲಿರುವ ಬರವಣಿಗೆ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. ನಿಪಿ 4 ನೋಟೀಸ್ ಆರೋಪಿಯ ವಿಳಾಸಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ನಿಪಿ 1 , 2 ಮತ್ತು 3 ನ್ನು ಒಂದೇ ಬರವಣಿಗೆಯಲ್ಲಿದ್ದು, ಅದನ್ನು ನಾನೇ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ 2 ರಲ್ಲಿರುವ ಬರವಣಿಗೆ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. ತಮ್ಮನಿಗೆ ಖಾತ್ರಿಗೆ ಕೊಟ್ಟ ಚೆಕ್ ನ್ನು ನಾನು ದುರುಪಯೋಗಪಡಿಸಿಕೊಂಡು ಅಕ್ರಮ ಲಾಭವನ್ನು ಹೊಂದುವ ಉದ್ದೇಶದಿಂದ ಈ ಕೇಸ್ ನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ನನ್ನಿಂದ ಯಾವುದೇ ಸಾಲ ಪಡೆದಿಲ್ಲ , ಚೆಕ್ ನ್ನು ನೀಡಿಲ್ಲ ಎಂದರೆ ಸರಿಯಲ್ಲ. ತಮ್ಮನೊಂದಿಗೆ ಎಲೆಕ್ಟ್ರಿಕ್ ವ್ಯವಹಾರದ ಮಾಡಿರುವ ವಿಚಾರ ಮತ್ತು ಚೆಕ್ ನ್ನು ಕೊಟ್ಟಿರುವ ವಿಚಾರ ಗೊತ್ತಿದ್ದರೂ ನಾವೇ ಆರೋಪಿಗೆ ಮೋಸ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

ಸಾಕ್ಷಿ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಬೇಲೂರು .